ಶತಮಾನೋತ್ಸವ ವಿಶೇಷ ಪುರವಣಿ



# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

## ಶತಮಾನೋತ್ಸವ ಸಂಭ್ರಮ

# ಸುಬ್ರಹ್ಮಣ್ಯ ಸಭಾ, ಮಂಗಳೂರು - ನಡೆದು ಬಂದ ದಾರಿ

1908ನೇ ಇಸವಿ ಜುಲ್ಯಾ ತಾ. 12 ರಲ್ಲು ಮಂಗಳೂರು ತಾಲೂಕು ದೇವಸ್ಯ ಪಡೂರು ಗ್ರಾಮದ ಕ್ಯಾದಿಗೆ ಶಿವರಾಯರ ಭವನದಲ್ಲಿ, ಶಿವಬ್ರಾಹ್ಮಣ ಸಮಾಜದ ಮುಂದಾಳುಗಳ ಸಭೆಯೊಂದು ಮತ ಸಂಬಂಧವಾದ ಒಂದು ವಿವಾದದ ತೀರ್ಮಾನಕ್ಕೆಂದು ಸೇರಿತು. ಅಂದು ಭಾಗವಹಿಸಿದ ಪ್ರಮುಖರೆಲ್ಲರೂ ನಮ್ಮ ಯುವಕರಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿತ್ತು, ನಮ್ಮ ಆಚಾರ ವಿಚಾರಗಳಲ್ಲಿ ಏಕರೂಪತೆಯನ್ನುಂಟು ಮಾಡಿ, ಜಾತಿಯ ವಿವಾದ ಗಳನ್ನು ನಮ್ಮೊಳಗೇ ತೀರ್ಮಾನಿಸಿಕೊಂಡು ಸಮಾಜಾಭ್ಯುದಯದ ಕಾರ್ಯಗಳನ್ನು ಸಾಧಿಸಲು ಒಂದು ಶಾಶ್ವತ ಸಂಸ್ಥೆಯನ್ನು ಸ್ಥಾಪಿಸುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ಪರಿಣಾಮವಾಗಿ, ಆ ದಿನ ಒಂದು ಉಪಸಮಿತಿಯನ್ನು ರಚಿಸಿ, ಅಂತಹ ಶಾಶ್ವತ ಸಂಸ್ಥೆಗೆ ಅಗತ್ಯವಿರುವ ಕ್ರಮ ನಿಬಂಧನೆಗಳನ್ನು ತಯಾರಿಸಿ, ಯೋಗ್ಯ ಹೆಸರನ್ನು ಸೂಚಿಸಿ, ಇಡೀ ಜಿಲ್ಲೆಯ ಪ್ರತಿನಿಧಿಗಳನ್ನು ಆಮಂತ್ರಿಸಿ, ಸಾಮಾಜಿಕರ ಮಹಾಸಭೆಯೊಂದನ್ನು ಕರೆದು, ಅಲ್ಲಿ ವಿಷಯಗಳನ್ನೆಲ್ಲ ಪರಾಮರ್ಶಿಸಿ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದರು.

1908ನೇ ಇಸವಿ ದಶಂಬರ ತಾರೀಕು 30 ಮತ್ತು 31ರಂದು ಕುಂಭಾಟ್ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ. ಅಂದು ಉದ್ದೇಶಿಸಿದ ಶಾಶ್ವತ ಸಂಸ್ಥೆಗೆ **ಶ್ರೀ ಸುಬ್ರಹ್ಮಣ್ಯ ಸಭಾ** ಎಂದು ನಾಮಕರಣ ಮಾಡಲಾಯಿತು. "ಶ್ರೀ ಸುಬ್ರಹ್ಮಣ್ಯ ಸಭೆ" ಶಿವಬ್ರಾಹ್ಮಣ ಸಮಾಜದ ಪ್ರಾತಿನಿಧಿಕ ಸಂಸ್ಥೆಯಾಗುವಂತೆ ಸಕಲರೂ ಪ್ರಯತ್ನಿಸಬೇಕೆಂದೂ ನಿರ್ಣಯಿಸಿ, ಸಭಾ ಸದಸ್ಯರ ಪ್ರಥಮ ಮಹಾಸಭೆಯನ್ನು 1909ನೇ ಇಸವಿ ದಶಂಬರ ತಿಂಗಳಲ್ಲಿ ಸಭೆ ಜರಗಿಸಿ ಸುಬ್ರಹ್ಮಣ್ಯ ಸಭೆಯ ವಿಚಾರವನ್ನು ನಮ್ಮವರಿಗೆಲ್ಲ ತಿಳಿಯಪಡಿಸಿ ಆದಷ್ಟು ಮಂದಿ ಸದಸ್ಯರನ್ನು ಸೇರಿಸುವುದಕ್ಕಾಗಿ ಪ್ರಾಂತ್ಯ ಪ್ರತಿನಿಧಿಗಳನ್ನು ನೇಮಿಸಿದರು.

1909ನೇ ಇಸವಿ ದಶಂಬರ ತಾ. 26 ಮತ್ತು 27ರಂದು ಪುತ್ತೂರು ನಟ್ಟೋಜಿ ವಿಷ್ಣುರಾಯರ ಭವನದಲ್ಲಿ ಕ್ರಮಪ್ರಕಾರ ಸದಸ್ಯರಾಗಿ ಸೇರಿದ್ದ ಸುಮಾರು 63 ಮಂದಿ ಸದಸ್ಯರ ಕೂಡುವಿಕೆಯಿಂದ ಪ್ರಥಮ ಮಹಾಸಭೆ ಜರಗಿತು.

1910ನೇ ಇಸವಿ ದಶಂಬರ ತಿಂಗಳಲ್ಲಿ ಪುತ್ತೂರು ಮಠದಬೆಟ್ಟಿನಲ್ಲಿಯೂ 1911ನೇ ಇಸವಿ ದಶಂಬರ ತಾ. 27 ರಂದು, ಮಂಗಳೂರಲ್ಲಿ ಪಾದೆಬೆಟ್ಟು ಕುಪ್ಪಣ್ಣಯ್ಯನವರ ಭವನದಲ್ಲಿ ನಡೆದು ವೈದಿಕ ವಿದ್ಯೆಗೆ ಪ್ರೋತ್ಸಾಹ ಕೊಡುವ ಹಾಗೂ ಬಡ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ವೇತನಕೊಡುವ ವಿಚಾರವೂ ಚರ್ಚಿಸಲ್ಪಟ್ಟು ಆ ಬಗ್ಗೆ ಕೆಲವು ನಿಯಮಗಳು ಮಾಡಲ್ಪಟ್ಟುವು.

ತಾ.31-10-1918ರಲ್ಲು ನಂದಳಿಕೆ ಮರಿಯಪ್ಪಯ್ಯ ಶ್ಯಾನುಭಾಗರು, ಶ್ರೀಮಾನ್ ಕುಡ್ವಿ ಭುಜಂಗರಾಯರು ಇಬ್ಬರನ್ನು 1ನೆಯ ಮತ್ತು 2ನೆಯ ಸದಸ್ಯರಾಗಿ ಶಾಶ್ವತ ಸದಸ್ಯರ ರಿಜಿಸ್ತ್ರಿಯಲ್ಲಿ ದಾಖಲಾಯಿತು.

30-12-1925ರಲ್ಲು ಶ್ರೀ ನಟ್ಟೋಜಿ ವಿಷ್ಣುರಾಯರ ಭವನದಲ್ಲಿ ಸುಮಾರು 73 ಮಂದಿ ಸಮಾಜ ಬಾಂಧವರ



ಸುಬ್ರಹ್ಮಣ್ಯ ಸಭಾ ಕಟ್ಟಡ - 1959ರಲ್ಲಿ

ಹಾಜರಾತಿಯಿಂದ ಬ್ರ. ಶ್ರೀ ಕುರೆಯ ನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆ ಜರಗಿತು. ಅಂದಿನ ಮಾನ್ಯ ಅಧ್ಯಕ್ಷರು ಸುಬ್ರಹ್ಮಣ್ಯ ಸಭೆಯ ಮೂಲ, ಅದರ ಬೆಳವಣಿಗೆ, ಸಾಮಾಜಿಕರ ನಿಷ್ಕ್ರಿಯತೆಯಿಂದಾಗಿ ಅದಕ್ಕೊದಗಿದ ಅವಸಾನದ ಸ್ಥಿತಿ, ಆದರೂ ಶಾಶ್ವತ ಸದಸ್ಯರಿರುವುದರಿಂದ ಅದು ಇನ್ನೂ ಜೀವಂತವಾಗಿದೆ ಎಂಬ ವಾದ, ಅದನ್ನು ಪುನರುಜ್ಜೀವನಗೊಳಿಸುವ ಆವಶ್ಯಕತೆ ಇತ್ಯಾದಿಗಳನ್ನು ಹೃದಯಂಗಮವಾಗಿ ವಿವರಿಸಿದರು. ಆಯುರ್ವೇದ ಭೂಷಣ ಯಂ.ವಿ. ಶಾಸ್ತ್ರಿಗಳವರು ನಮ್ಮ ಸಮಾಜಕ್ಕೆ ಒಂದು ಪ್ರಾತಿನಿಧಿಕ ಸಂಸ್ಥೆಯ ಆವಶ್ಯಕತೆಯನ್ನು ಮನಮುಟ್ಟುವಂತೆ ನಿವೇದಿಸಿದರು. ಕಡಬ ಕುಂಭಾಟ್ ಕೃಷ್ಣಯ್ಯನವರು ಆ ಅಭಿಪ್ರಾಯಗಳನ್ನು ಅನುಮೋದಿಸಿ 'ಶ್ರೀ ಸುಬ್ರಹ್ಮಣ್ಯ ಸಭೆ'ಯನ್ನೇ ಪುನರುಜ್ಜೀವನಗೊಳಿಸಿ ಬಲಪಡಿಸಬೇಕು ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು. ಅದು ಸರ್ವಾನುಮತಿಯಿಂದ ಸ್ವೀಕರಿಸಲ್ಪಟ್ಟು ಅಂದೇ 37 ಮಂದಿ ವಂತಿಗೆಕೊಟ್ಟು ಸದಸ್ಯರಾಗಿ ಸೇರಿ ಹೊಸ ಆಡಳಿತ ಸಭೆನಡೆಸಿದರು.

ಸಭಾ ನಿಬಂಧನೆಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ, ನಿಬಂಧನೆಗಳನ್ನು ಮುದ್ರಿಸಿ ಪ್ರಕಟಿಸಿ 1931ನೇ ಇಸವಿ ಫೆಬ್ರವರಿ 15ನೇ ತಾರೀಕಿನಂದು ಕಡಬದ ತಲೇಕಿ ಶ್ರೀನಿವಾಸ ದೇವಸ್ಥಾನದಲ್ಲಿ ಪುನಃ ಮಹಾಸಭೆ ಜರಗಿತು.

ಅಂದಿನಿಂದ ಪ್ರತಿವರ್ಷವೂ ವರ್ಷಾವಧಿ ಮಹಾಸಭೆ ಜರಗಿ ಆರ್ಥಿಕ ಸ್ಥಿತಿಗತಿಗಳಿಗನು ಗುಣವಾಗಿ ಸ್ವಲ್ಪ ಹಣವನ್ನು ಧಾರ್ಮಿಕ ಸಂಸ್ಥೆಗಳ ಸಹಾಯಾರ್ಥವಾಗಿಯೂ, ಸ್ವಲ್ಪ ಹಣವನ್ನು ವೈದಿಕ ವಿದ್ಯೆಯ ಪ್ರೋತ್ಸಾಹಕ್ಕಾಗಿಯೂ ಉಳಿದುದನ್ನು ಇಂಗ್ಲಿಷ್ ವಿದ್ಯಾ ಪ್ರಚಾರಕ್ಕೆ ವೇತನ ರೂಪದಲ್ಲಿಯೂ ಕೊಡುವ ನಿರ್ಣಯಗಳನ್ನು ಮಾಡಿ, ಅದರಂತೆ ಸಹಾಯ ಕಾರ್ಯ ಕ್ರಮಗಳನ್ನು ಮುಂದುವರಿಸಲಾಯಿತು.

27-12-1941ರಲ್ಲು ಪುತ್ತೂರಿನ ಶ್ರೀ ನಟ್ಟೋಜಿ ಶಿವರಾಯರ ಭವನದಲ್ಲಿ ಜರಗಿದ ಮಹಾಸಭೆಯಲ್ಲಿ ಡಾ। ಯನ್. ವಿ. ಉಪಾಧ್ಯಾಯರು ಸಭೆಯನ್ನು ರಿಜಿಸ್ತ್ರಿ ಮಾಡಿಸಿ ಆಫೀಸನ್ನು ಮಂಗಳೂರಲ್ಲಿ ಸ್ಥಾಪಿಸಿ, ಅಲ್ಲಿರುವ ವಿದ್ಯಾವಂತ ಯುವಕರ ಸಹಾಯ ಸಹಕಾರಗಳಿಂದ ಸಭಾಕಾರ್ಯಗಳನ್ನು ಯಶಸ್ವಿಯಾಗಿ ಜರಗಿಸುವ ಸಾಧ್ಯತೆಯನ್ನು ಸಭಾ ಪ್ರಾರಂಭದ ಮೊದಲೇ ವಿವರಿಸಿದರು.

ಶ್ರೀ ವೈ. ನಾರಾಯಣರಾಯರು ಕಾರ್ಯದರ್ಶಿಯ ಕೆಲಸವನ್ನು ವಹಿಸಿಕೊಂಡು ಸಭೆಯ ರಿಕಾರ್ಡುಗಳನ್ನು ತಂದು ಮಂಗಳೂರಲ್ಲಿ ರಥಬೀದಿಯಲ್ಲಿರುವ ಡಾ। ಯನ್. ವಿ. ಉಪಾಧ್ಯಾಯರ ಔಷಧಾಲಯದಲ್ಲಿ ಆಫೀಸನ್ನು ಸ್ಥಾಪಿಸಿದರು.

1942ನೇ ಇಸವಿಯಲ್ಲಿ ಸುಬ್ರಹ್ಮಣ್ಯ ಸಭೆಯು ರಿಜಿಸ್ತ್ರಿ ಮಾಡಲ್ಪಟ್ಟ ಮೇಲೆ ಅದು ಜೀವಂತ ಸಂಸ್ಥೆಯಾಯಿತು. ಇಡೀ ಜಿಲ್ಲೆಯಲ್ಲಿ ಅಲ್ಲಲ್ಲಿರುವ ಸುಮಾರು 620 ಮನೆಗಳಲ್ಲಿ ವಾಸಿಸುತ್ತಿರುವ ಸುಮಾರು 1560 ಮಂದಿ ಪ್ರಾಯಭರಿತರಾದ ಗೃಹಸ್ಥರನ್ನು ಸೇರಿಸಿಕೊಂಡು ಒಂದು ಸಂಸ್ಥೆಯನ್ನು ಸಂಘಟಿಸುವುದು ಸುಲಭಸಾಧ್ಯವಲ್ಲ. ಅದೂ ಸಂಚಾರ-ಸಂಪರ್ಕಾನುಕೂಲತೆಗಳಿಲ್ಲದ ಆ ಕಾಲದಲ್ಲಿ ! ಅನಂತರ 1943ನೇ ಮೇ ತಿಂಗಳು 16ರಂದು ಮಂಗಳೂರಲ್ಲಿ ಸಭೆಯ ಮಹಾಧಿವೇಶನವನ್ನೂ ಪ್ರಥಮ ಶಿವಬ್ರಾಹ್ಮಣ ಪರಿಷತ್ತನ್ನೂ, ಅದಕ್ಕೋಸ್ಕರ ಏರ್ಪಟ್ಟ ಸ್ವಾಗತ ಸಮಿತಿಯ ಸಹಾಯ ಸಹಕಾರಗಳಿಂದ ಯಶಸ್ವಿಯಾಗಿ ಜರಗಿಸಲಾಯಿತು.

ಆಯುರ್ವೇದ ಭೂಷಣ ಯಂ.ವಿ. ಶಾಸ್ತ್ರಿಗಳವರು ಮಾಡಿದ ಅಮೋಘ ಭಾಷಣದಲ್ಲಿ ಸ್ಥಾನಿಕ ಶಬ್ದದ ಉತ್ಪತ್ತಿ ಮತ್ತು ವ್ಯಾಪ್ತಿಯನ್ನು ಸಾಧಾರವಾಗಿ ವಿಮರ್ಶಿಸಿ 'ಸ್ಥಾನಿಕ' ಶಬ್ದವು ಆದಿಯಲ್ಲಿ ಜಾತಿ ವಾಚಕವಾಗಿರಲಿಲ್ಲವೆಂದೂ, ಧಾರ್ಮಿಕ ಲೌಕಿಕ ಅಧಿಕಾರ ವಾಚಕ ವಾಗಿತ್ತೆಂದೂ, ಸ್ಥಾನಿಕ ಅಧಿಕಾರಿಗಳು ಉಚ್ಚ ಬ್ರಾಹ್ಮಣರಾಗಿದ್ದರೆಂದೂ ಶಾಸನಗಳ ಆಧಾರದಿಂದ ಪ್ರತಿಪಾದಿಸಿ, ಸ್ಥಾನಿಕರ ಶ್ರೇಷ್ಠತೆಯನ್ನು ಹೃದಯಂಗಮವಾಗಿ ನಿವೇದಿಸಿದರು.

ವಿದ್ಯಾರ್ಥಿವೇತನ ವಿತರಣೆಗೆ ಶಾಶ್ವತವಾದ ವ್ಯವಸ್ಥೆ ಮಾಡುವ ಉದ್ದೇಶದಿಂದ ಶ್ರೀಮಾನ್ ಕುಡ್ವಿ ಭುಜಂಗ ರಾಯರು ಬೊಂಬಾಯಿಯ ಇಂಪೀರಿಯಲ್ ಬೇಂಕಿನಲ್ಲಿ ಕುಡ್ವಿ ಭುಜಂಗ ರಾವ್ ಚ್ಯಾರಿಟಿ ಟ್ರಸ್ಟ್ ನಂಬ್ರ 156 ಎಂಬ ಟ್ರಸ್ಟನ್ನು ರೂ. 20,000 ಮೂಲಧನದಿಂದ ತಾ. 9-8-1944 ರಂದು ರಿಜಿಸ್ತ್ರಿ ಮಾಡಿಸಿ, ಅದರಿಂದ ಬರುವ ರೂ.600 ವಾರ್ಷಿಕ ಉತ್ಪನ್ನವನ್ನು ವಿದ್ಯಾರ್ಥಿ ವೇತನ ವಿತರಣೆಗಾಗಿ ಶಾಶ್ವತವಾಗಿ ದೊರೆಯುವ ವ್ಯವಸ್ಥೆ ಮಾಡಿದರು. ಪ್ರಕೃತದಲ್ಲಿ ಮೊತ್ತವು ಒಂದೂವರೆ ಲಕ್ಷಕ್ಕೆ ಏರಿದೆ. ಕುಡ್ವಿ ಭುಜಂಗ ರಾಯರಿಗೆ ಸಭೆಯೂ, ಸಮಾಜದ ಇಂದಿನ ಮತ್ತು ಮುಂದಿನ ಪೀಳಿಗೆಯವರೂ ಚಿರಋಣಿಯಾಗಿರುತ್ತಾರೆ.

ತಾ.9-12-1945ರಲ್ಲು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಜರಗಿದ ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಶ್ರೀ ಶೃಂಗೇರಿ ಜಗದ್ಗುರು ಸಂಸ್ಥಾನದ ಧರ್ಮಾಧಿಕಾರಿಗಳು ನಾವು ಸುಸಂಘಟಿತರಾಗಿ ಮುಂದುವರಿದಲ್ಲಿ ನಮ್ಮ ಸಮಾಜವು ಬಹು ಬೇಗನೆ ಉಚ್ಚ ಬ್ರಾಹ್ಮಣ ಶ್ರೇಣಿಯಲ್ಲಿ ಪರಿಗಣಿಸಲ್ಪಡುವ ಸುಯೋಗವು ಲಭಿಸುವುದೆಂದು ಆಶ್ವಾಸನೆಯಿತ್ತು ಹರಸಿದರು.

ನಮ್ಮ ಸಾಮಾಜಿಕರ ಹೆಸರು, ವೃತ್ತಿ, ಉದ್ಯೋಗ ವಿಳಾಸಗಳನ್ನೊಳಗೊಂಡ ಕೈಪಿಡಿಯನ್ನು 1947ನೇ ಇಸವಿ ಅಕ್ಟೋಬರದಲ್ಲಿ ಪ್ರಕಟಿಸಿದುದು ಒಂದು ಮಹತ್ಕಾರ್ಯವಾಗಿತ್ತು.

ತಾ.25-4-1948ರಲ್ಲಿ ಸಭೆಯ ದ್ವಿತೀಯ ಮಹಾಧಿವೇಶನವು ಮಂಗಳೂರಲ್ಲಿ ಜರಗಿತು. ನಿತ್ಯ ವ್ಯವಹಾರ ನಡೆಸಲಿಕ್ಕೂ, ಇತರ ಸಾಮಾಜಿಕ ಚಟುವಟಿಕೆಗಳಿಗೂ ಒಂದು ಸಭಾಭವನದ ಅವಶ್ಯಕತೆ ಹೆಚ್ಚುತ್ತಾ ಬಂತು. ಅದು ಎಲ್ಲರಿಗೂ ಮನವರಿಕೆಯಾಯಿತು.

ಸಭಾಭವನವನ್ನು ಕಟ್ಟಿಸುವುದಕ್ಕೋಸ್ಕರ ಸಭಾಮಂದಿರನಿಧಿಗೆ ಧನಸಂಗ್ರಹ ಕಾರ್ಯವೇನೋ ಮುಂದುವರಿಯುತ್ತಿತು. ಆದರೆ ಸಭೆಯ ಹೆಸರಲ್ಲಿ ಒಂದು ಸ್ವಂತ ಕಟ್ಟೋಣವನ್ನು ಕಟ್ಟಿಸುವ ಭರವಸೆಯನ್ನೀಯುವಷ್ಟು ಧನಸಂಗ್ರಹವಾಗಿರಲಿಲ್ಲ. ಇಂತಹ ಸ್ಥಿತಿಯನ್ನು ಪರಿಶೀಲಿಸಿದ ಶ್ರೀಮಾನ್ ಕುಡ್ವಿ ಭುಜಂಗ ರಾಯರು ಮುಂದಾಳಾಗಿ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್ ಎಂಬ ಸ್ಥಳವನ್ನು ತನ್ನ ತೀರ್ಥರೂಪರ ಸ್ಮಾರಕವಾಗಿ ಮತ್ತು ಅವರ ಸುಪುತ್ರರುಗಳ ಉದಾರ ದಾನವಾಗಿ, ಸಭೆಯು ಕೊಂಡುಕೊಳ್ಳುವಂತೆ ಕಾರ್ಯದರ್ಶಿಯವರಿಗೆ ದ್ರವ್ಯಾನುಕೂಲತೆವೊದಗಿಸಿದರು.

23-6-1950ರಲ್ಲು ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್ ಎಂಬ ಸ್ಥಳವನ್ನು ಸಭೆಯ ಹೆಸರಿನಲ್ಲಿ ರಿಜಿಸ್ಟ್ರೇಶನ್ ಮಾಡಲಾಯಿತು.

ಈ ಎಲ್ಲ ಉದಾರ ದಾನಗಳ ಪ್ರತೀಕವಾಗಿ 'ಶ್ರೀ ಸುಬ್ರಹ್ಮಣ್ಯ ಸಭಾಸದನ'ವು ರೂಪುಗೊಂಡಿತು. 11-5-1959ರಂದು ಶುಭ ಮುಹೂರ್ತದಲ್ಲಿ ಸಭಾಸದನದ ಪ್ರವೇಶೋತ್ಸವವು ವಿಜೃಂಭಣೆಯಿಂದ ಜರಗಿತು.

ಅಂದೇ ನಡೆದ ಸಭೆಯ ತೃತೀಯ ಮಹಾಧಿವೇಶನದಲ್ಲಿ ಆಡಳಿತಮಂಡಳಿಗೆ ಚುನಾವಣೆ ನಡೆಯಿತು.

(...7ನೇ ಪುಟಕ್ಕೆ)

ಈ ವಿಶೇಷ ಪುರವಣಿಯ ಪ್ರಾಯೋಜಕರು :

**ಚಿಟ್ಪಾಡಿ ಸರ್ವೋತ್ತಮ ರಾವ್**

ಅಧ್ಯಕ್ಷರು, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ
ಅಧ್ಯಕ್ಷರು, ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿ, ಪಡುಬಿದ್ರಿ
ಉಪಾಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು
ಅಧ್ಯಕ್ಷರು, ಫೈನಾನ್ಸ್ ಕಮಿಟಿ, ಶ್ರೀ ಸುಬ್ರಹ್ಮಣ್ಯ ಶತಮಾನೋತ್ಸವ ಆಚರಣಾ ಸಮಿತಿ, ಮಂಗಳೂರು